259 (880) : ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಿವೃತ್ತ ನೌಕರರ ಸಂಖ್ಯೆ ಎಷ್ಟು;

ಆ) ಇವರಿಗೆ ಕಳೆದ ಮೂರು ವರ್ಷಗಳಲ್ಲಿ ಕೊಟ್ಟ ನಿವೃತ್ತಿ ವೇತನ ಹಾಗೂ ಇವರ ಭತ್ಯೆಗಳ ಒಟ್ಟು ಮೊತ್ತವೆಷ್ಟು;

ಇ) ಈ ಮೊತ್ತವನ್ನು ಯಾವ ಶೀರ್ಷಿಕೆಗೆ ಸೇರಿಸಲಾಗುತ್ತದೆ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು)

ಅ) ಸರ್ಕಾರದ ನಿವೃತ್ತಿದಾರರ ಒಟ್ಟು ಸಂಖ್ಯೆಯು ಲಭ್ಯವಿರುವುದಿಲ್ಲ. ಆದರೆ ಪಿಂಚಣಿ ಪಡೆಯುತ್ತಿರುವವರ ಸಂಖ್ಯೆ 212969.

ಆ) (ರೂ. ಲಕ್ಷಗಳಲ್ಲಿ)

| | 2001–02 | 2002–03 | 2003–04 |
|---|---|---|---|
| ನಿವೃತ್ತಿ ವೇತನ | 108234 | 135649 | 141030 |

ಇ) 2071 ವಿಶ್ರಾಂತಿ ವೇತನ ಇತರೆ ನಿವೃತ್ತಿ ಸೌಲಭ್ಯಗಳು

260 (881) : ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಈ ಕೆಳಕಂಡ ಪ್ರಶ್ನೆಗಳಿಗೆ ಮುಖ್ಯಮಂತ್ರಿಗಳು ಉತ್ತರಿಸುವರೆ?

ಅ) ವೀರಪ್ಪನ್ ಅಡುಗುತಾಣ ಕೊಳ್ಳೇಗಾಲ ತಾಲ್ಲೂಕು ಗುಡ್ಡಗಾಡು ಪ್ರದೇಶದಲ್ಲಿ ಗ್ರಾನೈಟ್ ಗಣಿಗಾರಿಕೆಗೆ ಅನುಮತಿ ನಿರಾಕರಿಸಿತ್ತೇ.

ಆ) ಈಗ ವೀರಪ್ಪನ್ ಅಂತ್ಯಗೊಂಡಿರುವುದರಿಂದ ಮತ್ತೆ ಗ್ರಾನೈಟ್ ಗಣಿಗಾರಿಕೆಗೆ ಅವಕಾಶ ಕಲ್ಪಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ

ಇ) ತಿಳಿದಿದ್ದಲ್ಲಿ, ಈ ಕಪ್ಪು ಗ್ರಾನೈಟ್ ಗಣಿಯು ಗಣಿಗಾರಿಕೆ ಮಾಡುವಂತೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಇದಕ್ಕೆ ನಿಷೇಧಾಜ್ಞೆಯನ್ನುನ ತರಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಕೊಳ್ಳೆಗಾಲ ತಾಲ್ಲೂಕಿನಲ್ಲಿ ಕಲ್ಲು ಗಣಿಗಾರಿಕೆಗೆ ವಿಧಿಸಿರುವ ನಿರ್ಬಂದವನ್ನು ಸಡಿಲಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಇ) ಸರ್ಕಾರದ ಆದೇಶ ಸಂಖ್ಯೆ ಸಿಐ. 164 ಎಂಎಂಎನ್. 98 ದಿನಾಂಕ: 7–6–2003 ರನ್ವಯ ಕೊಳ್ಳೇಗಾಲ ತಾಲ್ಲೂಕಿನಾದ್ಯಂತ ಎಲ್ಲಾ ತರಹದ ಅಂದರೆ ಪಟ್ಟಾ, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ಜಮೀನುಗಳಲ್ಲಿ ಕಲ್ಲು ಗಣಿಗಾರಿಕೆ ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದ್ದು ಸದರಿ ತಡೆಯಾಜ್ಞೆ ಇನ್ನೂ ಜಾರಿಯಲ್ಲಿರುತ್ತದೆ. ಅದರ ಇತ್ತೀಚೆಗೆ ವೀರಪ್ಪನ್ ಅಂತ್ಯ ವಾದ ನಂತರ ಅಲ್ಲಿನ ಪರಿಸ್ಥಿತಿಯನ್ನು ಪರಿಗಣಿಸಿ ಕಲ್ಲುಗಣಿ ಗಾರಿಕೆಗೆ ಅನುಮತಿ ನೀಡಲು ಪರಿಶೀಲಿಸಲಾಗುತ್ತಿದೆ.

ಈ) ಈಗಾಗಲೇ ವಿಧಿಸಿರುವ ನಿಷೇಧಾಜ್ಞೆ ಇನ್ನೂ ಜಾರಿಯಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಪರಿಶಿಷ್ಟ ಜಾತಿ : ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ**

261 (52) : ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುದೋಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಯಲ್ಲಿ ನೇಮಕವಾಗದೆ ಉಳಿದಿರುವ ವೃಂದವಾರು ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು;

ಆ) ನೇಮಕಾತಿಯಲ್ಲಿ ವಿಳಂಬವಾಗಲು ಕಾರಣಗಳೇನು;

ಇ) ನೇಮಕಾತಿಯ ಪ್ರಕ್ರಿಯೆಯನ್ನು ಎಷ್ಟು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು?

ಈ) ಸರ್ಕಾರದ ವಿವಿಧ ಇಲಾಖೆಯಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಕ್ರೋಢೀಕರಿಸಿ ಒಂದೇ ವಿಜನ್ಸಿ ಮೂಲಕ ನೇಮಕಾತಿಯನ್ನು ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದ 15 ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಎಲ್ಲಾ ವೃಂದದ ಇನ್ನೂ 1052 ಬ್ಯಾಕ್‌ಲಾಗ್ ಹುದ್ದೆಗಳು ನೇಮಕಾತಿ ಆಗದೆ ಬಾಕಿ ಉಳಿದಿದೆ.

ಆ) ಬಹಳಷ್ಟು ಸಂದರ್ಭಗಳಲ್ಲಿ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗೆ ಆಯ್ಕೆ ಹೊಂದಿದ್ದು ಅವರುಗಳು ಅಂತಿಮವಾಗಿ ಹುದ್ದೆ ಆಯ್ಕೆ ಮಾಡಿದ ಮೇಲೆ ಕಾಯ್ದಿರಿಸಿದ ಪಟ್ಟಿಯ ಅಭ್ಯರ್ಥಿ ನೇಮಕ ಮಾಡಬೇಕಾದ ಸಂದರ್ಭ, ಆಯ್ಕೆ ಹೊಂದಿದ ಅಭ್ಯರ್ಥಿಯ ಸಿಂಧುತ್ವ ಪ್ರಮಾಣ ಪತ್ರ ಪಡೆಯುವಲ್ಲಿ ಆದ ವಿಳಂಬ, ಕೆಲವು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಸಿಗದೆ ಮತ್ತು ಪ್ರಕಟಣೆ ಹೊರಡಿಸಬೇಕಾದ ಸಂದರ್ಭ, ಕೆಲವು ಹುದ್ದೆಗಳಿಗೆ ನೇಮಕಾತಿ ಮಾಡಲು ಖಾಲಿ ಹುದ್ದೆ ಇಲ್ಲದಿರುವುದು, ಕೆಲವು ಹುದ್ದೆಗಳು ನ್ಯಾಯಾಲಯದಲ್ಲಿ ಬಾಕಿ ಉಳಿದಿರುವುದು ಇತ್ಯಾದಿಗಳು ವಿಳಂಬಕ್ಕೆ ಕಾರಣವಾಗಿದೆ.

ಇ) ನೇಮಕಾತಿ ಪ್ರಕ್ರಿಯೆಯು ಹಲವಾರು ಎಡರು ತೊಡರುಗಳನ್ನು ಬಗೆಹರಿಸಿ ಮುಂದುವರಿದಿರುತ್ತದೆ. ಶೀಘ್ರದಲ್ಲೇ ಉಳಿದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು.

ಈ) ಸರ್ಕಾರವು ಬ್ಯಾಕ್‌ಲಾಗ್ ಹುದ್ದೆ ತುಂಬುವ ಬಗ್ಗೆ ಈಗಾಗಲೇ ದಿ: 21.11.2001 ರಂದು ಅಧಿಸೂಚನೆ ಹೊರಡಿಸಿದ್ದು, ಅದರಂತೆ ಗ್ರೂಪ್ ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗ ಗ್ರೂಪ್ ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳು ನೇಮಕ ಮಾಡುವ ಅಧಿಕಾರವುಳ್ಳವರಾಗಿರುತ್ತಾರೆ. ಅದರಂತೆ ಈಗಾಗಲೇ ಶೇ. 80 ರಷ್ಟು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಗಿದಿದ್ದು, ಉಳಿದ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ಒಂದು ವಿಜೆನ್ಸಿ ಮೂಲಕ ನೇಮಕಾತಿ ಮಾಡಬೇಕಾದರೆ ಈಗಿನ ನಿಯಮಗಳಿಗೆ ತಿದ್ದುಪಡಿ ಬರಬೇಕಾಗುತ್ತದೆ. ಇದರಿಂದ ನೇಮಕಾತಿ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗಲಿದ್ದು, ಈ ಹಂತದಲ್ಲಿ ಬದಲಾವಣೆ ಇರುವುದು ಸೂಕ್ತವಾಗಿರುವುದಿಲ್ಲ.